


ಅನುಭವಿಸುತ್ತಿದ್ದಾರೆ. ಈ ಸಂಕಟದ ನಡುವೆ ಮಗರಾಯನಿಂದ 'ಮನೆ ಮಾರಿ ನನಗೆ ದುಡ್ಡು ಕೊಡಿ' ಎಂಬ ವರಾತ.

ಮೇಲಿನ ಎರಡೂ ಪ್ರಕರಣಗಳನ್ನು ಗಮನಿಸಿದಾಗ ಈ ಎಲ್ಲ ವಿಷಾದಕರ ಪರಿಸ್ಥಿತಿಗೆ ಮೂಲ ಕಾರಣವೆಂದರೆ ಹಣದ ಆಸೆ, ದುರಾಶೆ. ವಯಸ್ಸಿದ್ದಾಗ ತಮ್ಮ ಮುಂದಿನ ಜೀವನಕ್ಕೆ ಬೇಕಾದ ಹಣಕಾಸಿನ ಭದ್ರತೆಯನ್ನು ಮಾಡಿಕೊಳ್ಳದೆ, 'ವೃದ್ಧಾಪ್ಯದಲ್ಲಿ ಮಕ್ಕಳು ನಮ್ಮ ಊರುಗೋಲಾಗಿರುತ್ತಾರೆ' ಎಂಬ ಹಿಂದಿನ ಕಾಲದ ನಂಬಿಕೆಯನ್ನು ಈಗಲೂ ಕೆಲವು ಪೋಷಕರು ಹೊಂದಿರುವುದೇ ಈ ವಿಷಮ ಪರಿಸ್ಥಿತಿಗೆ ಕಾರಣವೆನ್ನಬಹುದು. ಆದರೆ ನಂಬಿಕೆಯ ಆ ಊರುಗೋಲು ಇಂದು ಮುರಿದ ಕೋಲಾಗಿದೆ. ಸಂಕಟದ ಸನ್ನಿವೇಶಗಳು ಬಂದಾಗ ಸಾಮಾನ್ಯವಾಗಿ ಜನ, 'ತಮ್ಮ ಈ ಎಲ್ಲ ದುರವಸ್ಥೆಗೆ ಹಣೆಬರಹವೇ ಕಾರಣ. ನಾವು ಈ ರೀತಿ ಅನುಭವಿಸಬೇಕೆಂಬುದು ಭಗವಂತನ ಇಚ್ಛೆ ಆಗಿತ್ತೋ ಏನೋ? ನಾವು ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ದೆವೊ, ಅದನ್ನೀಗ ಅನುಭವಿಸಬೇಕಾಗಿದೆ' ಎಂದು ನೋವಿನಲ್ಲೂ ಸಮಾಧಾನ ಮಾಡಿಕೊಳ್ಳುತ್ತಾರೆ. ಈ ವಿಧಿ ಅಥವ ಹಣೆಬರಹ ಎನ್ನುವುದು ನಮ್ಮ ಸಮಾಧಾನಕ್ಕೆ ಹೇಳಿಕೊಳ್ಳಬಹುದಾದ ತಾತ್ಕಾಲಿಕ ಪರಿಹಾರವಷ್ಟೇ. ಕೌಟುಂಬಿಕ ಬಿರುಕಿನ ಹಲವಾರು ಘಟನೆಗಳು ನಮ್ಮ ಕಣ್ಣಮುಂದೆಯೇ ನಡೆಯುತ್ತಿದ್ದರೂ, ಪತ್ರಿಕೆಗಳಲ್ಲಿ ಓದುತ್ತಿದ್ದರೂ ನಾವು ಎಚ್ಚೆತ್ತುಕೊಳ್ಳುವುದಿಲ್ಲ. ನಮ್ಮ ಭದ್ರತೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳದೆ, ವಿಧಿ ಎಂದು ಕುಳಿತರೆ ಅದು ಸ್ವಯಂ ಕೃತಾಪರಾಧವಲ್ಲದೆ ಮತ್ತಿನ್ನೇನು?



ಈಗ ಕಾಲ ಬದಲಾಗಿದೆ. ತಂದೆ ತಾಯಿ, ಗುರು ಹಿರಿಯರು ಎಂಬ ಮಾನವೀಯ ಸಂಬಂಧಗಳು ಬಹುತೇಕ ಮಾಯವಾಗಿವೆ. ಹಣಕ್ಕಾಗಿ ಏನನ್ನಾದರೂ ಮಾಡಬಹುದು, ಯಾವ ಮಟ್ಟಕ್ಕಾಗಿಯಾದರೂ ಇಳಿಯಬಹುದು ಎಂದು ತಿಳಿದಿರುವ ಕೆಲವರು ದಯಾಹೀನರಾಗಿ, ಕ್ರೌರ್ಯದಿಂದ ನಡೆದುಕೊಳ್ಳುತ್ತಿದ್ದಾರೆ. ಹಿಂದಿನ ಕೂಡು ಕುಟುಂಬದ ವ್ಯವಸ್ಥೆ ಮಾಯವಾಗಿ, 'ತಾನು ತನ್ನ ಹೆಂಡತಿ/ಗಂಡ ಮಕ್ಕಳು' ಎಂಬ ಸಂಕೀರ್ಣ ವ್ಯವಸ್ಥೆಯಲ್ಲಿ ಬಾಳುತ್ತಿರುವವರಿಗೆ ಹಣವೇ ಪ್ರಧಾನವಾಗಿ ಮಿಕ್ಕಿದ್ದೆಲ್ಲವೂ ಗೌಣವಾಗಿದೆ. ಇಂತಹ ವಿಷಮ ಪರಿಸ್ಥಿತಿಗೆ ಪ್ರತಿಯೊಬ್ಬರೂ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತಿದೆ. ದುರಂತವೆಂದರೆ ಇಂದಿನ ವಿದ್ಯಾವಂತ ಯುವಕರೂ ಸಹ ಈ ಪೀಡಕ ವರ್ಗಕ್ಕೆ ಸೇರಿರುವುದು.

ಪ್ರತಿಯೊಬ್ಬರೂ ವರ್ತಮಾನದಲ್ಲಿ ಬಾಳುವುದರೊಂದಿಗೆ ನಾಳೆಯ ತಮ್ಮ ನಿವೃತ್ತಜೀವನದಲ್ಲಿ ಸುಖ ಶಾಂತಿ ನೆಮ್ಮದಿಯಿಂದ ಬಾಳುವುದರ ಬಗ್ಗೆ ಯೋಚನೆ ಮತ್ತು ಯೋಜನೆ ಮಾಡಬೇಕಾಗಿರುವುದು ಅತ್ಯಂತ ಅಗತ್ಯ ಹಾಗೂ ಅನಿವಾರ್ಯ.

ಗಟ್ಟಿಮುಟ್ಟಾಗಿದ್ದಾಗ, ಆರೋಗ್ಯವಾಗಿದ್ದಾಗ ಹಣಕಾಸಿನ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುವುದು ಸೂಕ್ತ. ತಮ್ಮ ದಿನನಿತ್ಯದ ಖರ್ಚಿಗೆ ಬೇಕಾದ ಅಗತ್ಯ ಹಣವೇ ಅಲ್ಲದೆ ವಯಸ್ಸಾದ ಮೇಲೆ ಉಂಟಾಗುವ ವಯೋಸಹಜ ಕಾಯಿಲೆಗಳಿಗೆ ಅನಿವಾರ್ಯವಾಗಿ ಖರ್ಚು ಮಾಡಲೇಬೇಕಾದ ಅಗತ್ಯಗಳು ಬಂದೊದಗುತ್ತವೆ. ಆಧುನಿಕ ವೈದ್ಯಕೀಯ ಸೌಲಭ್ಯಗಳು ಹಾಗು ಸೌಕರ್ಯಗಳ ಪರಿಣಾಮವಾಗಿ ವ್ಯಕ್ತಿಯ ಸರಾಸರಿ ಜೀವಿತಾವಧಿಯು ಹೆಚ್ಚಳವಾಗುತ್ತಿದೆ. ವೈದ್ಯಕೀಯ ವೆಚ್ಚವೂ ಏರುತ್ತಿದೆ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹಣಕಾಸಿನ ಭದ್ರತೆಯನ್ನು ಮಾಡಿಕೊಳ್ಳಬೇಕಾದ್ದು ಅತ್ಯಂತ ಅವಶ್ಯಕ.

ಸಾಧ್ಯವಾದಷ್ಟೂ ತಮ್ಮ ಹಣಕಾಸಿನ ವ್ಯವಹಾರವನ್ನು ತಾವೇ, ಅಂದರೆ ಗಂಡ/ಹೆಂಡತಿಯೇ ನೋಡಿಕೊಳ್ಳಬೇಕು. ಅದಕ್ಕಾಗಿ ಬ್ಯಾಂಕುಗಳಲ್ಲಿ ಜಂಟಿ ಖಾತೆಯನ್ನು ಹೊಂದಿರಬೇಕು.

ವಯಸ್ಸಾದ ಹಾಗೆ ದೈಹಿಕ ಅಸ್ವಸ್ಥತೆ, ಜೊತೆ ಜೊತೆಗೆ ಮಾನಸಿಕ ಅಸ್ವಸ್ಥತೆಯೂ ಉಂಟಾಗಬಹುದು. ನೆನಪಿನ ಶಕ್ತಿ ಕುಂಠಿತವಾಗಬಹುದು. 'ನರ ಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ' ಎಂದು ದಾಸರು ಹೇಳಿರುವ ಹಾಗೆ, ದೈಹಿಕ ಹಾಗೂ ಮಾನಸಿಕ ಆರೋಗ್ಯ ಚೆನ್ನಾಗಿದ್ದಾಗಲೇ ತಮ್ಮ ನಂತರ ಆಸ್ತಿ, ಹಣ ಯಾರಿಗೆ ತಲುಪಬೇಕು ಎಂಬುದರ ಬಗ್ಗೆ ವಿಲ್ ಮಾಡುವುದು ಅತ್ಯಂತ ಸೂಕ್ತ.

ಸಂಪಾದಿಸಿದ ಆಸ್ತಿ ತಾವು ಜೀವಂತವಾಗಿರುವವರೆಗೆ ತಮ್ಮ ಹೆಸರಿನಲ್ಲಿಯೇ ಇದ್ದು, ನಿಧನಾನಂತರ ಮಾತ್ರ ಅದು ವಾಸುದಾರರಿಗೆ ಸೇರುವಂತಾಗಿರಬೇಕು.

ದಿನೇ ದಿನೇ ವೈದ್ಯಕೀಯ ವೆಚ್ಚ ಏರುತ್ತಿರುವ ಹಾಗೂ ಹೊಸ ಹೊಸ ಕಾಯಿಲೆಗಳು ಕಾಣಿಸಿಕೊಳ್ಳುತ್ತಿರುವ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ವೈದ್ಯಕೀಯ ವಿಮೆ ಮಾಡಿಸುವುದು ಉತ್ತಮ.

ಪ್ರತಿಕ್ರಿಯಿಸಿ: feedback@sudha.co.in